O.S. NO. 161/2023
DW – 2 .
Dated 24–06–2026.

ಸಾಕ್ಷಿಯನ್ನು ಈ ದಿನ ದಿನಾಂಕ 24–06–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಎಮ್ ಎಸ್ ಎ ವಕೀಲರಿಂದಃ

ನಾನು ಶಾಲೆ ಕಲಿತಿಲ್ಲ. ನನ್ನ ತಂದೆಗೆ ನಾವು 4 ಜನ ಮಕ್ಕಳು. ನಮ್ಮ ಮನೆತನದ ಕೆಲಸ ಒಕ್ಕಲುತನ ಎಂದರೆ ನಿಜ. ನನ್ನ ತಂದೆ ಕಾಲದಿಂದ 2 ಎತ್ತಿನ ಕಮತ ಇದೆ ಎಂದರೆ ಸಾಕ್ಷಿ ನಾನು 20 ವರ್ಷದ ವಯಸ್ಸಿನವನು ಆದ ನಂತರ ಕಮತ ಇದೆ ಎಂದು ನುಡಿದಿರುತ್ತಾರೆ. ಅದಕ್ಕಿಂತ ಮುಂಚೆ ಪಾಲಿನಿಂದ ಹೊಲ ಮಾಡಲು ಕೊಡುತ್ತಿದ್ದರು. ನಮ್ಮ ಕುಟುಂಬಕ್ಕೆ 25 ಎಕರೆ ಹೊಲ ಇದೆ. ಸದರಿ 25 ಎಕರೆ ಸಹ ಪಾಲಿನಿಂದ ಮಾಡಲು ಕೊಡುತ್ತಿದ್ದರು. ನನ್ನ ತಂದೆಯ 4 ಜನ ಮಕ್ಕಳಲ್ಲಿ ನಾನೇ ಹಿರಿಯವನು. ಇನ್ನುಳಿದ ನನ್ನ ಸಹೋದರರು ಸಹ ಒಕ್ಕುಲುತನ ಮಾಡುತ್ತಾರೆ. ಸದರಿ 25 ಎಕರೆ ಆಸ್ತಿ ನಮ್ಮ ಹಿರಿಯರಿಗೆ ಸರ್ಕಾರ ದವರು ಕೊಟ್ಟ ಜಮಿನು ಇದ್ದು ಅದು ಪೂಜಾರಕಿ ಜಮಿನು ಇರುತ್ತದೆ. ಸದರಿ ಜಮಿನುಗಳು ಪುಜಾರಕಿ ಜವಿನು ಎಂದು ತೊಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ಸದರಿ ಜಮಿನು ಬ್ರಿಟಿಷರ ಕಾಲದಲ್ಲಿ ಕೊಟ್ಟ ಜಮಿನು ಇದ್ದ ದಾಖಲೆಗಳು ಲಭ್ಯ ಇರುವುದಿಲ್ಲ. ನನಗೆ ಬ್ರಿಟಿಷರ ಕಾಲದ ಜಮಿನು ಎಂದು ಹೇಗೆ ಗೊತ್ತಾಯಿತು ಎಂದರೆ ನಮಗೆ ಹಿರಿಯುರು ಹೇಳತ್ತಿದ್ದರು ಎಂದು ನುಡಿದಿರುತ್ತಾರೆ. ನಮ್ಮ ಕುಟುಂಬದ ಹಿರೇತನ ನಮ್ಮ ತಂದೇಯವರೆ ಮಾಡುತ್ತಿದ್ದರು ಎಂದರೆ ನಿಜ. ನಮ್ಮ ತಂದೆ ಜೆವಂತ ಇರುವವರೆಗೆ

O.S. NO. 161/2023

DW – 2 .

Dated 24-06-2026.

ನಮ್ಮ ಕುಟುಂಬಕ್ಕೆ 2 ಎತ್ತಿನ ಕಮತ ಇತ್ತು ಎಂದರೆ ಸರಿ. ಸದರಿ 2 ಎತ್ತಿನ ಕಮತ ಕ್ಕೆ 20-25 ಎಕರೆ ಜಮಿನು ಉಳಿಮೆ ಮಾಡಲು ಬೇಕು ಎಂದರೆ ಸರಿ. ನನ್ನ ತಂದೆ ಮೃತಪಟ್ಟು ಈಗ 4-5 ವರ್ಷಗಳು ಆಗಿರುತ್ತವೆ. ನನ್ನ ತಂದೆ ಜೀವಂತ ಇರುವವರೆಗೆ ನಾವೆಲ್ಲರೂ ಕೂಡಿಯೆ ಇದ್ದೇವು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಇನ್ನೂ ಕೂಡಿಯೇ ಇದ್ದೇವು ಎಂದು ನುಡಿದಿರುತ್ತಾರೆ. ನಮ್ಮ ಕುಟುಂಬಕ್ಕೆ ಇರುವ 25 ಎಕರೆ ಜಮಿನು ಮಾರಾಟ ಮಾಡಿದ್ದೀರೊ ಇದೆಯಾ ಎಂದರೆ ಸಾಕ್ಷಿ ಇನ್ನೂ ಇದೆ ಎಂದು ನುಡಿದಿರುತ್ತಾರೆ. ಸದರಿ ಜಮಿನನ್ನು ಎಲ್ಲರೂ ಕೂಡಿಕೊಂಡು ಸಾಗುವಳಿ ಮಾಡುತ್ತಾ ಬರುತ್ತಿದ್ದೇವೆ.

ನನ್ನ ತಂದೆ ಕಾಲದಿಂದ ಸದರಿ 25 ಎಕರೆ ಜಮಿನು ಪಾಲಿನಿಂದ ಮಾಡಲು ಕೊಟಟಿದ್ದರು. ಏಕೆ ಕೊಟಟ್ಟದ್ದರು ಎಂದರೆ ಸಾಕ್ಷಿ ನನ್ನ ತಂದೆಗೆ ಸಾಗುವಳಿ ಮಾಡಲು ನಿಗುತ್ತಿರಲಿಲ್ಲ ಹೀಗಾಗಿ ಪಾಲಿಗೆ ಮಾಡಲು ಬೆರೆಯವರರಿಗೆ ಕೊಟಿದ್ದರು ಎಂದು ನುಡಿದಿರುತ್ತಾರೆ. ಎಷ್ಟು ವರ್ಷದ ಹಿಂದೆ ಕೊಟ್ಟಿದ್ದರು ಎಂದರೆ ಸಾಕ್ಷಿ 25 ವರ್ಷಗಳ ಹಿಂದೆ ಕೊಟ್ಟಿದ್ದರು. ಆ ಸಮಯದಲ್ಲಿ ನಾನು ಒಕ್ಕುಲುತನ ಕೆಲಸ ಮಾಡುತ್ತಾ ಇದ್ದೇನು. ಸದರಿ 25 ಎಕರೆ ಜಮಿನು ನನ್ನ ತಂದೆ ನಾಗಪ್ಪ ಗಂಟಿ ರವರರಿಗೆ ಕೊಟ್ಟಿದ್ದರು. ಆ ಕುರಿತು ಲಿಖಿತ ದಾಖಲಾತಿ ಮಾಡಿದ್ದರಾ ಎಂದರೆ ಸಾಕ್ಷಿ ಮೌಖಿಕವಾಗಿ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ. ಸದರಿ ಗಂಟಿರವರಿಗೆ ನನ್ನ ತಂದೆ 20-25 ವರ್ಷದ ವರೆಗೆ ಹೊಲ ಪಾಲಿನಿಂದ ಮಾಡಲು ಕೊಟ್ಟಿದ್ದರು. ಸದರಿ 20-25 ವರ್ಷದ ಅವದಿಯಲ್ಲಿ ಸದರಿ ಗಂಟಿ

ರವರ ಹೆಸರು ವ್ಯವಸಾಯಗಾರ ಕಾಲಂನಲ್ಲಿ ಅವರ ಹೆಸರು ನಮೂದು ಆಗಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯಲು ಬರೆಸಲು ಯಾರು ಮಾಹಿತಿ ಕೊಟ್ಟರು ಎಂದರೆ ಯಾರು ಕೊಟ್ಟಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನಾನು ಹೆಬ್ಬೆಟ್ಟು ಮನಷ್ಯ ಇರುವುದರಿಂದ ನನಗೆ ಗೊತ್ತಾಗುವುದಿಲ್ಲ. ಹೆಬ್ಬಟು ಸಹಿ ಮಾಡು ಅಂತಾ ಹೇಳಿದ್ದರಿಂದ ಮಾಡಿದ್ದೇನೆ. ಇವತ್ತಿಗೂ ನಾನು ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಏನು ಬರೆದಿರುತ್ತರೆ ಎಂದು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಇಲ್ಲ. ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ. ಈ ದಿನ ನನಗೆ 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದು, ಮೊದಲಿನಿಂದ ನಾನು ಆತನ ಜೊತೆ ಕೂಡಿಯೇ ಇರುತ್ತೇವೆ ಎಂದರೆ ನಿಜ. ನಾನು ಮತ್ತು 1 ನೇ ಪ್ರತಿವಾದಿ ಒಳ್ಳೆ ಸ್ನೇಹಿತರು ಎಂದೆ ಸಾಕ್ಷಿ ಅವರ ತಂದೆ ಮತ್ತು ನಾನು ಸ್ನೇಹಿತರು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ಹೇಳಿಕೆಯ ಆಧಾರದ ಮೇಲೆ ನಾನು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಅವರು ಹೊಲ ಮಾಡಿ ಕುರಿತು ಸಾಕ್ಷಿ ಹೇಳು ಅಂತಾ ಹೇಳ್ದಿರಿಂದ ಬಂದಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. 1 ನೇ ಪ್ರತಿವಾದಿ ತನ್ನ ತಾಯಿ ಮತ್ತು ಅಕ್ಕ ತಂಗಿಯರಿಗೆ ಹೊಲ ಹೊಗುತ್ತದೆ ಅಂತಾ ನನಗೆ ಖೊಟ್ಟಿ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಯಾವತ್ತು ನಮ್ಮ ಹೊಲವನ್ನು ನಾಗಪ್ಪ ಗಂಟಿ ರವರಿಗೆ ಹಚ್ಚಿರುವುದ್ಲಿಲ ಎಂದರೆ ಸರಿಯಲ್ಲ. ಸದರಿ ನಮ್ಮ ಹೊಲ ಪಾಲಿನಿಂದ ಮಾಡಿದ್ದರಿಂದ ವರ್ಷಕ್ಕೆ ರೂ. 40-50 ಸಾವಿರ ಆದಾಯ ಬರುತ್ತಿತ್ತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾಗಪ್ಪ ಗಂಟಿ

ರವರು ನಮ್ಮ ಹೊಲದಲ್ಲಿ ತೆಗೆದ ಉತ್ಪನ್ನ ವನ್ನು ಮಾರಾಟ ಮಾಡಿದ ಕುರಿತು ರಶೀದಿಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಅವರು ಮಾರಾಟ ಮಾಡಿದ್ದು ನಮ್ಮ ಹತ್ತಿರ ಹೇಗೆ ರಶೀದಿ ಇರುತ್ತವೆ ಎಂದು ನುಡಿದಿರುತ್ತಾರೆ. ನಮ್ಮ ಮನೆತನಕ್ಕೆ 7 ಎಕರೆ 28 ಗುಂಟೆ ಜಮಿನು ಹೊರತು ಪಡಿಸಿ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನ ಸಹೊದರ ಮತ್ತು ತಾಯಿ ಹೆಸರಿನಲ್ಲಿ ಇರುತ್ತವೆ. ಸದರಿ 7 ಎಕರೆ 28 ಗುಂಟೆ ಜಮಿನು ನಾನು ಸಹ ಸಾಗುವಳಿ ಮಾಡುವುದಿಲ್ಲ ಒಬ್ಬ ನಾವಿ ಗಂಗಪ್ಪ ಎಂಬುವವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ನಾವಿ ಗಂಗಪ್ಪ ರವರ ಹೆಸರು ಹೇಗೆ ನಮ್ಮ ಆಸ್ತಿ ಉತಾರದಲ್ಲಿ ದಾಖಲಾಗಿರುತ್ತದೆ ಎಂದರೆ ನಮ್ಮ ಹಿರಿಯರು ಪಾಲಿನಿಂದ ಮಾಡಲು ಕೊಡುತ್ತಿದ್ದರು ಹೀಗಾಗಿ ಅವರು ಹೆಸಲು ಹತ್ತಿರಬಹುದು. 2009 ರಲ್ಲಿ ತಹಶಿಲ್ದಾರರವರ ಆದೇಶದ ಪ್ರಕಾರ ಸದರಿ ನಾವಿ ಗಂಗಪ್ಪ ರವರು ನಮ್ಮ 7 ಎಕರೆ 28 ಗುಂಟೆಯ ಜಮಿನಿನ ಉತಾರದಲ್ಲಿ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ 7 ಎಕರೆ 28 ಗುಂಟೆ ಜಮಿನಕ್ಕೆ ನನ್ನ ಹೆಸರು ಹೇಗೆ ಹತ್ತಿರುತ್ತದೆ ಎಂದರೆ ನನ್ನ ತಂದೆ ನನಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಮ್ಮ ಕುಟುಂಬಕ್ಕೆ ಇದ್ದ 7 ಎಕರೆ 28 ಗುಂಟೆ ಆಸ್ತಿ ಮಾತ್ರ ನನಗೆ ಬಿಟ್ಟು ಕೊಟಿರುತ್ತಾರೆ ಇದನ್ನು ಬಿಟ್ಟು ನಮ್ಮ ಕುಟುಂಬಕ್ಕೆ ಬೇರೆ ಜಮಿನುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರು ಮುದಕಪ್ಪ ಇದ್ದು, ಫಕಿರಪ್ಪ ಅಂತಾ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಬೇರಯವರು ಜಮಿನಿನ ಪಹಣಿ ಪತ್ರಿಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪಿ ಡಬ್ಲೂ - 1 ತನ್ನ ಸಾಕ್ಷಿ ಯಲ್ಲಿ ಮುದುಕಪ್ಪ

O.S. NO. 161/2023
DW – 2 .
Dated 24–06–2026.

ಮತ್ತು ಫಕಿರಪ್ಪ ಬೇರೆ ಬೇರೇ ವ್ಯಕ್ತಿಗಳು ಇರುತ್ತಾರೆ ಅಂತಾ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸಾಕ್ಷಿ ಅವರಿಗೆ ಗೊತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾರೇ ಕರೆದರು ಸಹ ಸಾಕ್ಷಿ ನುಡಿಯಲು ಬರುವ ಪ್ರವೃತ್ತಿ ಉಳ್ಳವನು ಎಂದರೆ ಸರಿಯಲ್ಲ. ನಾನು ಈ ಹಿಂದೆ ಸಾಕ್ಷಿ ನುಡಿಯಲು ಯಾವತ್ತು ಬಂದಿರುವುದಿಲ್ಲ. ನನ್ನ ಮೇಲೆ ಯಾವುದೇ ನ್ಯಾಯಾಲಯಗಳಲ್ಲಿ ಯಾವುದೇ ಸಿವಿಲ ವ್ಯಾಜ್ಯಗಳು ಇರುವುದಿಲ್ಲ.

ಪಾಟೀ ಸವಾಲುಃ 2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 2 ನೇ ಪ್ರತಿವಾದಿ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆ – ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.